# ಸರ್ಕಾರಿ ಪ್ರೌಢ ಶಾಲೆ ಬೇಗೂರು ,ಬೆಂಗಳೂರು-೬೮

## ಎರಡನೇ ಸಂಕಲನಾತ್ಮಕ ಮೌಲ್ಯಮಾಪನ ೨೦೧೫-೧೬

**೮ ನೇ ತರಗತಿ ಪ್ರಥಮ ಭಾಷೆ ಕನ್ನಡ ಅಂಕಗಳು:೪೦**

**ಭಾಗ -'ಎ'**

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. ೪*೧=೪**

೧. ಕೃಷ್ಣನ ಕೈಯಲ್ಲಿ ಸಿಕ್ಕ ಧೇನುಕ ಏನಾದ ?

೨. ತಾಂಡವನ ಯಾವ ಸಂಕಲ್ಪ ಈಡೇರಲಿಲ್ಲ ?

೩. ಆತ್ಮಲಿಂಗವನ್ನು ಹಿಡಿದುಕೊಂಡಿರಲು ವಟು ಹಾಕಿದ ನಿಬಂಧನೆ ಏನು ?

೪. ವಟುವಿನ ತಂದೆ ತಾಯಿಗಳು ಯಾರು ?

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೪*೨=೮**

೫. ವಸುದೇವ ಮಕ್ಕಳನ್ನು ನೆನೆದು ವ್ಯಥೆ ಪಟ್ಟ ಬಗೆ ಹೇಗೆ ?

೬.ಜ್ಞಾನಿ ಅಜ್ಞಾನಿಗಳ ಜೊತೆಗಿನ ಒಡನಾಟ ಹೇಗಿರುತ್ತದೆ ಎಂದು ಸರ್ವಜ್ಞ ಹೇಳಿದ್ದಾನೆ ?

೭.ತಾಂಡವನ ತಂದೆ ತಾಯಿಯರು ನೀರನ್ನು ಉಗುಳಲು ಕಾರಣವೇನು ?

೮.ಸಿಂಧೂ ಸಂಸ್ಕೃತಿಯ ಜನರು ಶೃಂಗಾರ ಪ್ರಿಯರು ಹೇಗೆ ?ವಿವರಿಸಿ.

**ಈ ಕೆಳಗಿನ ಹೇಳಿಕೆಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. ೧*೩**

೯. ''ಗುರುವತ್ತಣಿಂದೆಳವೆಯೊಳೆ''.

**೧೦.ಡಾ||ಡಿ.ಕೆ.ರಾಜೇಂದ್ರ ಅವರ ಸ್ಥಳ ,ಕಾಲ,ಕೃತಿ ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. ೧*೨=೨**

**೧೧.ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ. ೧*೩=೩**

ಚಂದನವ -----
-------------------------
------------------------
------------------------
---------------------------
---------------------------ಸಿಹಿಯ ಬಿಟ್ಟೆತ್ತೇ

ಅಥವಾ

ಕಾಗೆಯ ಮರಿ---------
-------------------------
-------------------------
------------------ಜ್ಞಾನವನರಿಯದೆ

**೧೨. ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು , ಅಡಕವಾಗಿರುವ ಮೌಲ್ಯವನ್ನಾಧರಿಸಿ ಪದ್ಯದ ಸಾರಾಂಶವನ್ನು ಬರೆಯಿರಿ. ೧*೩=೩**

**ಮಾತಾ ಪಿತರನು ಬಳಲಿಸುವಾತನು**
**ಯಾತ್ರೆಯ ಮಾಡಿದರೇನು ಫಲ**

mamatabhagwat1@gmail.com

**ಘಾತಕತನವನು ಬಿಡದೆ ನಿರಂತರ**

**ಗೀತೆಯನೋದಿದರೇನು ಫಲ**

**೧೩. ಈ ಕೆಳಗಿನ ಪ್ರಶ್ನೆಗಳಿಗೆ ಆರು ಅಥವಾ ಎಂಟು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೧*೩ =೩**

ಎಣ್ಣೆ ಹಚ್ಚಿಸಿಕೊಳ್ಳುವಾಗ ತಿಮ್ಮು ಮತ್ತು ವಾಸು ಪಟ್ಟ ಪಾಡನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಅಥವಾ

ಅಜ್ಜಯ್ಯ ಅವರ ಅಭ್ಯಂಜನ ಹೇಗೆ ನಡೆಯುತ್ತಿತ್ತು ವಿವರಿಸಿರಿ.

**೧೪. ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು ,ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. ೨*೧=೨**

ಯೋಗಿಯೊಬ್ಬ ಕಾಡಿನ ಮಾರ್ಗವಾಗಿ ಪ್ರಯಾಣ ಮಾಡುತ್ತಿದ್ದ . ದೂರದಲ್ಲಿ ಮರ ಒಡೆಯುತ್ತಿದ್ದ ಕೆಲವರು ಈ ಯೋಗಿ ಕಾಡಿನಲ್ಲಿ ಹೋಗುತ್ತಿರುವುದನ್ನು ನೋಡಿ, ''ನಿಲ್ಲಿ,ನಿಲ್ಲಿ '' ಎಂದು ಹೇಳುತ್ತ ಅವನತ್ತ ಓಡಿದರು.

ಆ ಕಾಡಿನಲ್ಲಿ ಒಬ್ಬ ರಾಕ್ಷಸಿ ಇದ್ದಾಳೆ.ಮನುಷ್ಯ ಮಾಂಸ ತಿನ್ನೋ ರಕ್ಕಸಿ ಅವಳು. ಎಷ್ಟು ಜನರನ್ನು ನೋಡಿದರೂ ಕೊಂದು ತಿಂದ್ಬಿಡ್ತಾಳೆ. ಆಮೇಲೆ ಅವರ ಹೆಬ್ಬೆರಳು ಮೂಳೆಗಳನ್ನು ಶೇಖರಿಸಿಟ್ಟುಕೊಂಡಿರುತ್ತಾಳೆ. ಹೀಗೆ ಈವರೆಗೂ ೯೯೯ ಹೆಬ್ಬೆರಳ ಮೂಳೆಗಳನ್ನು ಶೇಖರಿಸಿಟ್ಟುಕೊಂಡಿದ್ದಾಳೆ. ಒಂದು ಸಾವಿರ ಇಂಥ ಮೂಳೆಗಳು ಸಂಗ್ರಹವಾದ ಮೇಲೆ ಮಾಡಿ ಹಾಕ್ಕೊಳೋದು ಅವಳ ಆಸೆಯಂತೆ .ಆದ್ರಿಂದ ಕಾಡಿನೊಳಗೆ ಹೋಗ್ಬೇಡಿ.ಹೋದ್ರೆ ಸಮಸ್ಯೆ ಆಗುತ್ತೆ. ! ಎಂದು ಊರ ಜನ ಎಚ್ಚರಿಸಿದರು. ''ನಿಮ್ಮಗಳಿಗೆಲ್ಲ ಒಳ್ಳೆಯದು ಮಾಡಲು ನನಗೆ ಇದಕ್ಕಿಂತಲೂ ಬೇರೆ ಅವಕಾಶ ಯಾವುದಿದೆ ? '' ಎನ್ನುತ್ತಲೇ ಆ ಯೋಗಿ ಕಾಡಿನೊಳಗೆ ಹೋದ . ಇದ್ದಕ್ಕಿದ್ದ ಹಾಗೆಯೇ ಎದುರು ಬಂದ ಮನುಷ್ಯನೊಬ್ಬನನ್ನು ನೋಡಿ, ಅಹಂಕಾರದ ಮರದಿಂದ ಅಲ್ಲಿದ್ದ ಆಲದ ಮರದ ರೆಂಬೆಯೊಂದನ್ನು ಮುರಿದುಕೊಂಡು ಆ ರಾಕ್ಷಸಿ ಯೋಗಿಯತ್ತ ನುಗ್ಗಿ ಬಂದಳು. ಆದರೆ ಬೇರೆಯವರ ಹಾಗೆ ಆ ರಾಕ್ಷಸಿಯನ್ನು ನೋಡಿ ಯೋಗಿ ಬೆದರಿ ಓಡಲಿಲ್ಲ.

''ನನ್ನನ್ನು ಕೊಲ್ಲೋದ್ರಿಂದ ನಿಂಗೆ ಸಂತೋಷವಾಗೋದಾದರೆ ನನ್ನನ್ನು ಧಾರಾಳವಾಗಿ ಕೊಲ್ಲೋದು.ನೀನು ಬಲಶಾಲಿ ಅಂತ ಒಪ್ಕೋತೀನಿ. ಆದ್ರೆ ಒಂದು ವಿಷಯ ; ಆಲದ ಮರದ ರೆಂಬೆಯನ್ನು ಮುರಿಯೋ ಶಕ್ತಿ ನಿನಗಿದೆಯೇ ವಿನಾ ಅದನ್ನು ಮತ್ತೆ ಆ ಮರಕ್ಕೆ ಅಂಟಿಸೋ ಶಕ್ತಿ ನಿನಗಿಲ್ಲ. ನಾಶ ಮಾಡೋದು ಸುಲಭ ,ಉಳಿಸೋದು ಕಷ್ಟ ! '' ಎಂದು ರಾಕ್ಷಸಿಯ ಹತ್ತಿರ ಹತ್ತಿರ ಬರುತ್ತ ಆ ಯೋಗಿ ಮಾತನಾಡತೊಡಗಿದ. ಯೋಗಿಯ ಮಾತುಗಳಲ್ಲಿದ್ದ ಸತ್ಯಾಂಶ ಮತ್ತು ಕಳಕಳಿ ಆ ರಾಕ್ಷಸಿಯನ್ನು ಶರಣಾಗುವಂತೆ ಮಾಡಿತು. ಅಷ್ಟೇ ಅಲ್ಲ,ಆಮೇಲೆ ಅವಳು ಆ ಯೋಗಿಯ ಶಿಷ್ಯಳಾಗಿ ಹೋದಳು.

ಪ್ರಶ್ನೆಗಳು :

೧. ರಾಕ್ಷಸಿ ಏನು ಮಾಡುತ್ತಿದ್ದಳು?

೨. ಯೋಗಿ ರಾಕ್ಷಸಿಗೆ ಏನು ಹೇಳಿದರು ?

## ಭಾಗ – 'ಬಿ'

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ.ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ,ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ. ೩*೧=೩**

mamatabhagwat1@gmail.com

೧೫.ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದರೆ ಅದು ಈ ಮಾದರಿಯ ವಾಕ್ಯವೆನಿಸುವುದು.

ಎ) ಸಂಯೋಜಿತ ವಾಕ್ಯ ಬಿ)ಸಾಮಾನ್ಯ ವಾಕ್ಯ ಸಿ)ನಿಷೇಧಾರ್ಥಕ ವಾಕ್ಯ ಡಿ)ಮಿಶ್ರ ವಾಕ್ಯ

೧೬.'ಸವಿಗೂಳು' ಪದವು ಈ ಸಮಾಸದ ಉದಾಹರಣೆಯಾಗಿದೆ.

ಎ)ತತ್ಪುರುಷ ಸಮಾಸ ಬಿ)ಕರ್ಮಧಾರಯ ಸಮಾಸ ಸಿ)ದ್ವಿಗು ಸಮಾಸ ಡಿ)ಗಮಕ ಸಮಾಸ

೧೭."ಶಿವನ ತಲೆಯ ಜಟೆಯಿಂದ ಹೊರಟ ಶ್ರೀಮದ್ ಗಂಗೆಯಂತೆ " ಈ ವಾಕ್ಯದಲ್ಲಿರುವ ಅಲಂಕಾರ –

ಎ)ರೂಪಕ ಬಿ)ಯಮಕ ಸಿ)ಉತ್ಪ್ರೇಕ್ಷೆ ಡಿ)ಉಪಮಾ

**ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ. ೨*೧=೨**

೧೯. ಎರಡು : ಸಂಖ್ಯಾವಾಚಕ : : ಎರಡನೆಯ : _____

೨೦. ಭಕ್ತಿ : ಬಕುತಿ : : ಮುಕ್ತಿ : -----

**೨೧. .ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ,ಗಣವಿಭಾಗ ಮಾಡಿ,ಛಂದಸ್ಸಿನ ಹೆಸರು ಬರೆಯಿರಿ. ೧*೨=೨**

ತೋಹಿನಲಿ ತಾನಿರುಳು ಶರಸ
ನ್ನಾಹನಾಗಿರೆ ತಾಂಡವನು ತ
ದ್ವಾಹಿನಿಯೊಳದ್ದಿದನು ಕರವತಿಗೆಯನು ಕೈ ನೀಡಿ

ಅಥವಾ

ಭಾವಿಸಿದ ಜನಪದಂ ವಸು
ಧಾ ವಳಯ ವಿಲೀನ ವಿಶದ ವಿಷಯ ವಿಶೇಷಂ

## ಭಾಗ -'ಸಿ'

**೨೨. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. ೧*೨=೨**

* ಬೆಳೆಯುವ ಸಿರಿ ಮೊಳಕೆಯಲ್ಲಿ ಕಾಣು
* ಶಕ್ತಿಗಿಂತ ಯುಕ್ತಿ ಮೇಲು
* ಕಬ್ಬು ಡೊಂಕಾದರೆ ಅದರ ಸಿಹಿ ಡೊಂಕೇ ?

**೨೩. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ೬ ರಿಂದ ೮ ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಸಂಕ್ಷಿಪ್ತ ಪ್ರಬಂಧ ಬರೆಯಿರಿ. ೧*೩ =೩**

* ಸಾವಯವ ಕೃಷಿ
* ದೂರದರ್ಶನದ ಪ್ರಯೋಜನಗಳು
* ಪರಿಸರ ಸಂರಕ್ಷಣೆ

************************ ಕಾಯಕವೇ ಕೈಲಾಸ ****************************

mamatabhagwat1@gmail.com